Regn No M 1229 | 43rd Year | Sri 'Satyavadi' Mysore | 21—2—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ಸಂಸ್ಥೇದಾರ್ ವಿ. ವಿ. ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಪಾಕಿಸ್ತಾನ ಸೈನಿಕರಿಂದ ನೂತನ ವಿಧದ ಬುಲೆಟ್ ಪ್ರಯೋಗ

ಅಕ್ಕಿ ಜಪ್ತಿ

ಬೆಳಗಾಂ 20— ತಾ|| 16 ಮಧ್ಯ ರಾತ್ರಿ ಯಮಕನಗಂಡಿ ಕ್ಯಾಸಿಗೆ ಬೆಳಗಾಂವಿಯ ವಿಶೇಷ ಪೋಲೀಸು ಪಡೆಯು ಬೆಳಗಾವಿಯಿಂದ ಮುಂಬೈ ರಾಜ್ಯಕ್ಕೆ ಕಳ್ಳ ಮಾರ್ಗವಾಗಿ ಹೋಗುತ್ತಿದ್ದ ಎಂಟು ಅಕ್ಕಿಯ ಟ್ರಕ್ಕುಗಳನ್ನು ಹಿಡಿದು ಸುಮಾರು 750 ಚೀಲ ಅಕ್ಕಿಯನ್ನು ಜಪ್ತ ಮಾಡಿರುವುದಾಗಿ ತಿಳಿಯುತ್ತದೆ. ಈ ಟ್ರಕ್ಕುಗಳ ಸಂಗಡ ಇದ್ದ ಟ್ಯಾಕ್ಸಿಯನ್ನೂ ಕೂಡ ಪೋಲೀಸರು ಹಿಡಿದಿದ್ದು ಅದರಲ್ಲಿ ನಾಲ್ಕು ಜನ ದಲಾಲಿಗಳಿರುವುದಾಗಿ ತಿಳಿಯುತ್ತದೆ.

ಬಳುವಳಿ ತೆರಿಗೆ

ನವದೆಹಲಿ 20— 59—50 ರಲ್ಲಿ 3 ಕೋಟಿ ರೂಗಳ ಬಳುವಳಿ ತೆರಿಗೆಯನ್ನು ಅಂದಾಜುಮಾಡಲಾಗಿತ್ತು ; ಈ ವರ್ಷ ಜನವರಿ ಕೊನೆಯವರೆಗೆ 54 27 ಲಕ್ಷ ರೂಗಳ ಬಳುವಳಿಗೆ ತೆರಿಗೆ ಸಂಗ್ರಹವಾಗಿದೆ.

ಹಣ ಉತ್ಪಾದನೆ

ನವದೆಹಲಿ 20— 1958 ರಲ್ಲಿ ದೆಹಲಿ 4973 ಮಂದಿ ನಿಯಮೋಲ್ಲಂಘಿ ಸೈಕಲ್ ನಡೆಸಿದವರಿಂದ ರೂಗಳನ್ನು ಶೇಖರಿಸಿದ್ದು ಅದರಲ್ಲಿ ತೇವಣಿ ಮುಟ್ಟಿದ್ದರಿಂದಾಗಿ ಮಾಡಿದ್ದರಿಂದಾಗಿ 00 ರೂಗಳೂ ಜುಲ್ಮಾನೆಯಿಂದ ರೂಗಳೂ ಸೇರಿ : 11049 ಮಂ ಆಯಾಲಯವು ಶಿಕ್ಷೆಯನ್ನು ವಿ

ಪಾಕಿಯ ಪಂಚಾಂಗ

ಪಾ ಸುಡಾರಿದಾ ನೈನು ಶಿಜಾವಣಿ
ಕಾಪಿಪ್ಪ ಜೊಪಾಸಿ ಸರಿಂದ
22 ಪಾರ್ದಶಿ ಆಶ್ಲೇಷ

ಕರೀಂಗಂಜ್ 20 — ಭಾರತ ಪ್ರದೇಶಕ್ಕೆ ಗೋಪ್ಯಚಾರ ಮಾಡುತ್ತಿರುವ ಪಾಕಿಸ್ತಾನ ಸೈನಿಕರು ಟ್ರೇಸರ್ ರೌಂಡ್ಸ್ ಎಂಬ ಹೊಸ ಬುಲೆಟ್‌ಗಳನ್ನು ಉಪಯೋಗಿಸುತ್ತಿರುವರೆಂದು ಎರಡು ದಿನಗಳ ತನಿಖೆಯಿಂದ ಅಧಿಕೃತವಾಗಿ ತಿಳಿದುಬಂದಿದೆ ಹರ್ತಿಕಿತಿಲ್ಲ ಮೇಲೆ ಪಾಕಿಸ್ತಾನ ಸೈನಿಕರು ಗೋಳೀ ಬಾರು ಮುಂದುವರಿಯುತ್ತಿದೆ.

ವಿವಿಧ ವರ್ತಮಾನ-

ನವ ದೆಹಲಿ 20 — ಕಾಂಗ್ರೆಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿ ಈ ದಿನ 17 ಮಂದಿಯ ಕಾಂಗ್ರೆಸು ಕಾರ್ಯಕಾರಿ ಸಮಿತಿ ಘೋಷಿಸಿದರು. ಅದರಲ್ಲಿ ಪಂ|| ನೆಹರು ಇಲ್ಲ ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸಮಿತಿಯಲ್ಲಿರುವರು.

ನವ ದೆಹಲಿ 20 — ಭಾರತ ಅಧ್ಯಕ್ಷರು ಕೇರಳ ಶಿಕ್ಷಣ ಮಸೂದೆಗೆ ಅಂಗೀಕಾರವಿತ್ತರು

ನವ ದೆಹಲಿ 20 — ಗೃಹಮಂತ್ರಿ ಪಂ|| ಗೋವಿಂದ ಪಂತರಿಗೆ ಕೇರಳದ ಮುಖ್ಯ ಮಂತ್ರಿ ಶ್ರೀ ಇ ಎಂ ಎಸ್ ನಂಬೂದರಿ ಪಾದರು ತಂತಿ ಕಳಿಸಿದುದರಲ್ಲಿ ಯಾವ ಸದಸ್ಯರಿಗೂ ನಿಂದೆ ಆಗಿಲ್ಲವೆಂದು ಲೋಕಸಭೆಯು ಹಕ್ಕುಬಾಧ್ಯತಾ ಸಮಿತಿ ವ್ಯಕ್ತಮಾಡಿದೆ

ತಿರುವೇಂದ್ರಂ 20 — ಶ್ರೀಮತಿ ಕೆ. ಪಂಕಜಾಕ್ಷಿ ಅಮ್ಮ ಎಂಬಾಕೆ ಅಂಚೆ ಮಾಸೇರಳಾದಳು ಭಾರತದಲ್ಲಿ ಈಕೆ ಪ್ರಥಮ ಅಂಚೆ ಮಾಸೇರಳು ಇರಬಹುದು

ನವ ದೆಹಲಿ 20 — ಬ್ರೊಂಬು ಬಜಾರಿನ ಸನಿಹದಲ್ಲಿರುವ ಕುಂಬಾರ ಗುಂಡಿಯ 8 ಕಣ್ಣ ಅಂಗಡಿಗಳು ಅಗ್ನಿ ಅನಾಹುತದಿಂದ ಭಸ್ಮವಾದವು 5 ಸಹಸ್ರ ರೂ ಸ್ವತ್ತು ನಷ್ಟವಾಗಿದೆ

ಬೆಂಗಳೂರು 20 — ಮೈಸೂರು ಪ್ರಾಂತದ ಕೆಲವು ಬಂದೀಖಾನೆಗಳ ಬಂದಿಗಳ ಉಪಯೋಗಕ್ಕೆ ದಿನ ಮತ್ತು ವಾರಪತ್ರಿಕೆಗಳನ್ನು ಒದಗಿಸಲು ರೂ 4 ಸಹಸ್ರ ಮಂಜೂರ್ಮಾಡಿದೆ

ವಾಷಿಂಗ್ಟನ್ 19 — ಪಾಕಿಸ್ತಾನಕ್ಕೆ ಅಮೇರಿಕಾ ನಿನ್ನೆ ರೂ 28 ಕೋಟಿ ಸಾಲವಿತ್ತಿತು

ಹರಿಕಥೆ

ಮೈಸೂರು ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ (ಡಾ|| ಬಿ ಜಿ ದಾಸ್‌ರ ಗೃಹದಲ್ಲಿ) ನಾಳೆ ಸಂಜೆ 7 ಗಂಟೆಗೆ ಶ್ರೀ ಶ್ರೀಪಾದ ಶಾಸ್ತ್ರಿಯವರಿಂದ ಮಹಾತ್ಮ ಕಬೀರ್ ಎಂಬ ಹರಿಕಥೆ

ಸುದ್ದಿಗಳು

ನವದೆಹಲಿ 19— ಕಲ್ಕತ್ತಾ ನಗರಕ್ಕೆ ವೆಂಟಣಿಗೆ ನಗರವೆಂದು ಹೆಸರಿಡಬೇಕೆಂದೂ, ಅಲ್ಲಿ ವಿಶ್ವಾಗ್ರಹ, ಪ್ರತಿಭಟನಾ ಪ್ರದರ್ಶನ, ವೆಂಟಣಿಗೆ ಜೋಳಿಗೆ ಆಗಿದೆಯೆಂದೂ ಪಂ|| ನೆಹರು ಲೋಕಸಭೆಯಲ್ಲಿ ಹೇಳಿದರು.

ಬೆಂಗಳೂರು ೨೦— ಇಲಿಗಳ ಹಾವಳಿ ತಪ್ಪಿಸಲು ಕೇಂದ್ರ ಸರಕಾರ ಚಳವಳಿ ಹೂಡಬಹುದೆಂದು ಭಾರತದ ವ್ಯವಸಾಯ ಅಗವಂತಿ ಶ್ರೀ ಎಂ ವಿ ಕೃಷ್ಣಪ್ಪನವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ತಿಳಿಸಿದರು

ನವದೆಹಲಿ 20 — ಒಮ್ಮೆ ಬಳಸಲಾದ ರೈಲ್ವೇ ಟಿಕೀಟುಗಳನ್ನು ಮತ್ತೆ ಮಾರಾಟಮಾಡಿದರೆಂಬ ಹಾಗೂ ಈ ಸಂಬಂಧದಲ್ಲಿ ಒಳತನಿಖೆ ನಡೆಸಿದರೆಂಬ ಅಪವಾದನೆಯ ಮೇಲೆ ಲಕ್ನೋದ ವಿಶೇಷ ನ್ಯಾಯಾಧೀಶರು ಉತ್ತರ ರೈಲ್ವೆಯ ನಾಲ್ವರು ಉದ್ಯೋಗಿಗಳಿಗೆ 9 ತಿಂಗಳು ಕಠಿಣ ಶಿಕ್ಷೆ ಜೊತೆಗೆ ಜುಲ್ಮಾನೆಯನ್ನೂ ವಿಧಿಸಿದ್ದಾರೆ

ನವದೆಹಲಿ 20— ಜೀವವಿಮಾ ಕಾರ್ಪೊರೇಷನ್ನಿಗೆ ಇಲ್ಲಿವರೆಗೂ ಸಾಲವನ್ನಪೇಕ್ಷಿಸಿ ಸಹಕಾರ ವಸತಿ ನಿರ್ಮಾಣ ಸಂಸ್ಥೆಗಳಿಂದ 10 ಅರ್ಜಿಗಳು ಬಂದಿವೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಫಿಲಿಡೆಲ್ಫಿಯಾ 17— ಅಮೇರಿಕಾದ ಮಕ್ಕಳಿಗೆ ಹುಟ್ಟಿದ ಹಬ್ಬದ ಉಡುಗೆರೆಗಳಾಗಿ ಭಾರತದ ಮಕ್ಕಳು ಕಳುಹಿಸಿಕೊಟ್ಟಿರುವ ವಸ್ತುಗಳು ಏಪ್ರಿಲ್ ಮಧ್ಯದ ಹೊತ್ತಿಗೆ ಅಮೇರಿಕಾವನ್ನು ತಲುಪುವ ಸಂಭವವಿದೆ : ಭಾರತದ ಒಬ್ಬ ಪತ್ರಿಕೋದ್ಯಮಿ ವೀರೇಂದ್ರ ಅಧೀಯ ಎಂಬುವರು ಈ ಗೊಂಬೆಗಳ ಸಂಗ್ರಹವನ್ನು ಭಾರತದ ನಾನಾ ನಗರಗಳಲ್ಲಿ ಸಂಗ್ರಹಿಸಿದರು

ಧರ್ಮಮಾರ್ಗಾವಲಂಬನೆಯಾಗಲಿ !

ನಾವು ಯಜ್ಞಯಾಗಾದಿಗಳನ್ನು ಮಾಡಿದೆ, ದೇವತೆಗಳನ್ನು ಆರಾಧಿಸದೆ ಇದ್ದು, ನಮ್ಮ ಇಂದಿನ ಜೀವನವು ಧರ್ಮ ಮಾರ್ಗದಿಂದ ಬಲುದೂರ ಸರಿದು ಒರೇ ಐಹಿಕ ಸುಖಭೋಗದಲ್ಲೇ ಕಲ್ಲೀನರಾಗಿರುತ್ತಾ ' ಈಷಣತ್ರಯ ' ವೆಶ್ತೇ ಷಣಾ – ದಾರೇಷಣಾ – ಪುತ್ರೇಷಣಾ – ಹಣಬೇಕು ! ಹೆಂಡಂದಿರು ಬೇಕು ! ಮಕ್ಕಳು ಬೇಕು ! ಎಂಬೀ ರೀತಿಯ ಬೇಕುಗಳಲ್ಲೇ ಬಿದ್ದು ಹೊಳಲಾಡುತ್ತಿರುವಂತಾಗಿದೆ ; ಅದುಕಾರಣ ದೈವಕೃಪೆಯಿಂದ ಪೂರ್ಣ ವಂಚಿತರಾಗಿದ್ದೇವೆ ; ಆ ದೇವತೆಪಳು ಪರಮ ಕರುಣಾಳುಗಳಾದ ಕಾರಣ ಹಾಗೂ ಸತ್ಯಸಂಕಲ್ಪನಾದ ಆ ಜಗತ್ಕರ್ತನ ಆಜ್ಞೆಗೆ ಬಳಪಟ್ಟಿರುವ ಕಾರಣ, ಇಷ್ಟರಮಟ್ಟಿಗಾದರೂ ಬೀಳಿಸಿಕೊಂಡಿರುವಂತಾಗಿಬೆಯಲ್ಲದೆ ನಾವು ಇಂದು ಮುಂದುವರಿಯುತ್ತಿರುವ ಮಾರ್ಗವನ್ನು ನೋಡಿದರೆ ಭೀಕರವಾದ ಕ್ಷಾಮ – ಅತಿವೃಷ್ಟಿ – ವಿದ್ಯುತ್ಪಾತ - ವಿವಿಧ ಪಾಂ ಕಾತ್ರಿಮಿಕ ರೋಗ ಮುಂತಾದುವುಗಳ ಹಾವಳಿಯಿಂದ ಇಂದೇ ಜಗತ್ತಿನ ವಿನಾಶಕ್ಕೆ ದೇವತೆಗಳು ಮುಂದಾಗುವುದು ಸಮುಚಿತವಾಗಿದೆ.

ಈ ಸಂದರ್ಭದಲ್ಲಿ ' ಡಿ. ರಾಘವೇಂದ್ರರಾವ್ ' ಎಂಬ ಮಹನೀಯರೊ ಬ್ಬರು ದೊಡ್ಡ ಸಂಸ್ಕೃತಿಕ ಹಾಗೂ ಶಾಸ್ತ್ರಪಂಡಿತರು ಮೂವತ್ತು ವರ್ಷಗಳ ಹಿಂದೆ ಮದಂತಾಸು ಗವರ್ನರಂ ಪ್ರೈವೇಟು ಸೆಕ್ರಟರಿಗಳಾಗಿದ್ದವರು ಅಂದಿನ ಗೌರ್ನಮೆಂಟಿನಲ್ಲಿ ನಡೆಯುತ್ತಿಕ್ಕ ಅಕಾರ್ಯ ಧರ್ಮವಿದ್ರೋಹ ಕಾರ್ಯಗಳಿಂದ ಮನನೊಂದವರಾಗಿ ' ನಡುಮಧ್ಯಾಹ್ನ ಬಿಸಿಲಿನ ವೇಳೆಯಲ್ಲಿ ಸಿಡಿಲು ಹೊಡೆದು ನಮ್ಮಾ ಆಫೀಸಿನ ರಿಕಾರ್ಡಿನ ಜೊತೆಯಲ್ಲಿ ನಾನು ಸಹಾ ಸತ್ತು ಹಾಳಾಗಿಹೋದರೆ ಒಂದೊಮ್ಮೆ ನಾನು ಮಾಡಿದ ದ್ರೋಹ ಕಾರ್ಯಕ್ಕೆ ಸ್ವಲ್ಪ ಮಟ್ಟಿಗೆ ಪ್ರಾಯಶ್ಚಿತ್ತವಾಗಬಹುದೊ ? ಅದೂ ಇಲ್ಲವೋ ? ಅದರೇನು ಮಾಡಲಿ ? ಹೊಟ್ಟೆಯು ಸಲುವಾಗಿಯಂಕ್ಕದಂತೆ ನನ್ನ ಕೈ ಗವರ್ನರ ಪ್ರತಿನಿಧಿಯಾಗಿ ಹಸಾ ಸ್ವರವನ್ನು ಪಾಕುತ್ತಿದೆ ' ಯೆಂದು ತಮ್ಮ ಸಂತಾಪವನ್ನು ಉದ್ಗರಿಸಿರುವರು ; ಇಂದಿನ ಪರಿಸ್ಥಿತಿಯು ಅದಕ್ಕಿಂತಲೂ ಮುಂದುವರಿದಿದೆಯಲ್ಲದೆ, ನಮ್ಮಾ ಸ್ವರಾಜ್ಯದಲ್ಲಿ ಜಾತಿ ಮತ ಧರ್ಮಗಳೆಂಬ ಶಬ್ದಗಳನ್ನೇ ಕೋಶದಿಂದ ತೆಗೆದುಹಾಕುವಂತಹ ದುಸ್ಥಿತಿ ಬಂದೊದಗಿದೆ.

ದಿವ್ಯವಾಣಿ

ದೊಡ್ಡವಂಲ್ಲ ನ್ಯಾಯದ ಸಲುವಾಗಿ ಹೋರಾಡುವ ಮನುಜನಿಗೆ ಅಪಕ್ಕ ಗಳು ಬಂದೊದಗಿದರೂ ಶ್ಲಾಘನೀಯವಾಗಿದೆ.

SHAKTI SUDHA

A Superb Tonic

ಗೋಕ್ಷಣ, ಪ್ರಾಣದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

ಗೋಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಕ್ಷಣೆ, ಪ್ರಾಣದಯೆ, ಸಸುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ

Our Bangalore Sales Depot address—
71 / 4 Arcot Sreenivasachar St, Bangalore 2.

ವುಡ್‌ಲ್ಯಾಂಡ್ಸ್ ಕೀರ್ತಿಯುತ 4 ನೇ ವಾರ

.... ಸಹಸ್ರಾರು ಮಂದಿ ನೋಡಿ ಅನುಮೋದಿಸುತ್ತಿರುವ ಚಿತ್ರರತ್ನ ....

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ– ನೂತನ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಿನ ನೃತ್ಯಗಳು ಗೀವಾಂಶಲರಿಸಲ್

ಅಪೆರಾ— 21–2–59 ರಿಂದ

...ಕುರುಪಿನ್ ಜ್ಯೋತಿ

ಅಂಜಲಿದೇವಿ, ನಾಗೇಶ್ವರರಾವ್, ರಂಗರಾವ್ ಪಾತ್ರವಹಿಸಿರುವರು

ಅಮೋಘ ತಮಿಳು ಚಿತ್ರ — — ಪ್ರತಿದಿನ 3 ಆಟಗಳ

Sri 'SATYAVADI' Daily

Oldest Newspaper in the State ; Splendid

Advertisement Tariff

Casual	Rs 1
2 insertions and above	" 1
Contract above 100 inches	1
" 500	0-75

Column length 12½ inches ; width 2 inches; 4 col

The decision of the management is final in a

Manager "Satyavadi", Chamarajapuram, M

Edited, Printed & Published by Dharma Prachara Nara
Krishna Rao, at the Satyavadi Press Ch